# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 839

ಸದಸ್ಯರ ಹೆಸರು : **ಶ್ರೀ ವೈ.ಎಂ.ಸತೀಶ್**
**(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 21-02-2024

| | ಪ್ರಶ್ನೆ | ಉತ್ತರ |
|---|---|---|
| ಅ. | ಕೊಪ್ಪಳ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಸರ್ಕಾರಕ್ಕೆ ಕಟ್ಟಬೇಕಿದ್ದ ಹಣವನ್ನು ಖಜಾನೆಗೆ ಪಾವತಿಸದೆ ಸಿಬ್ಬಂದಿಗಳು ಅಕ್ರಮವಾಗಿ ದುರ್ಬಳಕೆ ಮಾಡಿಕೊಂಡಿರುವುದು ನಿಜವೇ; ಹಾಗಿದ್ದಲ್ಲಿ, ಹಣ ದುರ್ಬಳಕೆ ಮಾಡಿಕೊಂಡ ವಿವರಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು; | ಕೊಪ್ಪಳ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಸರ್ಕಾರಕ್ಕೆ ಕಟ್ಟಬೇಕಿದ್ದ ಹಣವನ್ನು ಖಜಾನೆಗೆ ಪಾವತಿಸದೇ ಸಿಬ್ಬಂದಿಗಳು ಅಕ್ರಮವಾಗಿ ದುರ್ಬಳಕೆ ಮಾಡಿಕೊಂಡಿರುವುದರ ಬಗ್ಗೆ ದೂರು ಬಂದ ಹಿನ್ನಲೆಯಲ್ಲಿ ವಿಶೇಷ ಲೆಕ್ಕಪರಿಶೋಧನೆ ಕೈಗೊಂಡು ವರದಿಯನ್ನು ಪಡೆಯಲಾಗಿದ್ದು, ಸದರಿ ವರದಿಯು ಪರಿಶೀಲನಾ ಹಂತದಲ್ಲಿದೆ. |
| ಆ. | ಈ ಹಣ ದುರ್ಬಳಕೆ ಮಾಡಿಕೊಂಡ ಅಧಿಕಾರಿಗಳು ಮತ್ತು ನೌಕರರುಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಇವರುಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲು ಸರ್ಕಾರವು ಕ್ರಮಕೈಗೊಳ್ಳುವುದೆ? ವಿವರ ನೀಡುವುದು | ಲೆಕ್ಕಪರಿಶೋಧನಾ ವರದಿಯಲ್ಲಿನ ಅಂಶಗಳ ಕುರಿತಾದ ವಿಚಾರಣೆಗಳು ಪರಿಶೀಲನೆ ಹಂತದಲ್ಲಿರುವುದರಿಂದ ಕೂಲಂಕಷವಾಗಿ ಪರಿಶೀಲಿಸಿದ ನಂತರ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| ಇ. | ರಾಜ್ಯದಲ್ಲಿನ ಇತರೆ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಈ ರೀತಿಯ ಅಕ್ರಮಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅವುಗಳ ಮಾಹಿತಿ ನೀಡುವುದು? | ರಾಜ್ಯದಲ್ಲಿನ ಇತರೆ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ರಾಜಸ್ವ ದೂರುಪಯೋಗದ ಅಕ್ರಮಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿ ಗೋಕಾಕ ಇಲ್ಲಿನ ಖಜಾನೆ ವಿಭಾಗದಲ್ಲಿ ರಾಜಸ್ವ ದುರುಪಯೋಗ ನಡೆದಿದ್ದು ಈ ಕುರಿತು ಜಂಟಿ ಇಲಾಖಾ ವಿಚಾರಣೆ ನಡೆಸಲು ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿರುತ್ತದೆ. ಅದರಂತೆ ಅವರು ಸದರಿ ಪ್ರಕರಣದ ವಿಚಾರಣೆಯನ್ನು ನಡೆಸಿ ವರದಿಯನ್ನು ಸಲ್ಲಿಸಿದ್ದು, ಪರಿಶೀಲನೆಯಲ್ಲಿರುತ್ತದೆ.<br><br>ಪ್ರಾದೇಶಿಕ ಸಾರಿಗೆ ಕಚೇರಿ, ಕೆ.ಆರ್.ಪುರಂ ಇಲ್ಲಿನ ಖಜಾನೆ ವಿಭಾಗದಲ್ಲಿ ರಾಜಸ್ವ ದುರುಪಯೋಗ ನಡೆದಿದ್ದು ಈ ಕುರಿತು ಜಂಟಿ ಇಲಾಖಾ ವಿಚಾರಣೆ ನಡೆಸಲು ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿದ್ದು, ಸದರಿಯವರು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿ, ಆದೇಶ ಸಂಖ್ಯೆ: ಸಾರಿಇ 7 ಸಾಇಸೇ 2016 ದಿನಾಂಕ: 01.10.2022ರಲ್ಲಿ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ವಿವರವನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |

**ಟಿಡಿ 09 ಟಿಡಿಕ್ಯೂ 2024**

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 839ಕ್ಕೆ ಅನುಬಂಧ

| ಕ್ರ.ಸಂ. | ಹೆಸರು<br>ಶ್ರೀ/ ಶ್ರೀಮತಿ | ಪದನಾಮ | ಕೈಗೊಂಡಿರುವ ಕ್ರಮ |
|---|---|---|---|
| 1. | ಎಲ್. ಲಿಂಗರಾಜು | ಪ್ರಾ.ಸಾ.ಅ. ನಿವೃತ್ತ | ಸರ್ಕಾರದ ಆದೇಶ ಸಂಖ್ಯೆ: ಸಾರಿಇ 07 ಸಾಇಸೇ 2016 ಬೆಂಗಳೂರು ದಿನಾಂಕ: 01-10-2022 ರಲ್ಲಿ ಕೆ.ಆರ್. ಪುರಂ ಕಛೇರಿಯ ಖಜಾನೆ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಸರ್ಕಾರಿ ರಾಜಸ್ವ ದುರುಪಯೋಗ ಮಾಡಿರುವ ಪ್ರಕರಣದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 (1) (ಎ) ರನ್ವಯ ಶ್ರೀ ಎಲ್. ಲಿಂಗರಾಜು, ಪ್ರಾದೇಶಿಕ ಸಾರಿಗೆ ಅಧಿಕಾರಿ (ನಿವೃತ್ತ) ಇವರ ನಿವೃತ್ತ ವೇತನದಲ್ಲಿ ಶೇ 5 ರಷ್ಟನ್ನು 6 ತಿಂಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ. |
| 2. | ಪಿ. ಶಾಂತಕುಮಾರ | ಸಾ.ಪ್ರಾ.ಸ. ನಿವೃತ್ತ | ಸರ್ಕಾರದ ಆದೇಶ ಸಂಖ್ಯೆ: ಸಾರಿಇ 07 ಸಾಇಸೇ 2016 ಬೆಂಗಳೂರು ದಿನಾಂಕ: 01-10-2022 ರಲ್ಲಿ ಕೆ.ಆರ್. ಪುರಂ ಕಛೇರಿಯ ಖಜಾನೆ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಸರ್ಕಾರಿ ರಾಜಸ್ವ ದುರುಪಯೋಗ ಮಾಡಿರುವ ಪ್ರಕರಣದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 (1) (ಎ) ರನ್ವಯ ಶ್ರೀ ಪಿ. ಶಾಂತಕುಮಾರ, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ (ನಿವೃತ್ತ) ಇವರ ನಿವೃತ್ತ ವೇತನದಲ್ಲಿ ಶೇ 5 ರಷ್ಟನ್ನು 6 ತಿಂಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ. |
| 3. | ವಿ. ಶ್ರೀಧರ್ | ಸಾ.ಪ್ರಾ.ಸ. ನಿವೃತ್ತ | ಸರ್ಕಾರದ ಆದೇಶ ಸಂಖ್ಯೆ: ಸಾರಿಇ 07 ಸಾಇಸೇ 2016 ಬೆಂಗಳೂರು ದಿನಾಂಕ: 01-10-2022 ರಲ್ಲಿ ಕೆ.ಆರ್. ಪುರಂ ಕಛೇರಿಯ ಖಜಾನೆ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಸರ್ಕಾರಿ ರಾಜಸ್ವ ದುರುಪಯೋಗ ಮಾಡಿರುವ ಪ್ರಕರಣದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 (1) (ಎ) ರನ್ವಯ ಶ್ರೀ ವಿ. ಶ್ರೀಧರ್, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ (ನಿವೃತ್ತ) ಇವರ ನಿವೃತ್ತ ವೇತನದಲ್ಲಿ ಶೇ 5 ರಷ್ಟನ್ನು 6 ತಿಂಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ. |
| 4. | ಎಲ್.ಕೆ. ಕೃಷ್ಣಮೂರ್ತಿ | ಅಧೀಕ್ಷಕರು ನಿವೃತ್ತ | ಸರ್ಕಾರದ ಆದೇಶ ಸಂಖ್ಯೆ: ಸಾರಿಇ 07 ಸಾಇಸೇ 2016 ಬೆಂಗಳೂರು ದಿನಾಂಕ: 01-10-2022 ರಲ್ಲಿ ಕೆ.ಆರ್. ಪುರಂ ಕಛೇರಿಯ ಖಜಾನೆ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಸರ್ಕಾರಿ ರಾಜಸ್ವ ದುರುಪಯೋಗ ಮಾಡಿರುವ ಪ್ರಕರಣದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 (1) (ಎ) ರನ್ವಯ ಶ್ರೀ ಎಲ್.ಕೆ. ಕೃಷ್ಣಮೂರ್ತಿ, ಅಧೀಕ್ಷಕರು (ನಿವೃತ್ತ) ಇವರ ನಿವೃತ್ತ ವೇತನದಲ್ಲಿ ಶೇ 5 ರಷ್ಟನ್ನು 6 ತಿಂಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ. |
| 5. | ದೃವಕುಮಾರಿ | ಅಧೀಕ್ಷಕರು ನಿವೃತ್ತ | ಸರ್ಕಾರದ ಆದೇಶ ಸಂಖ್ಯೆ: ಸಾರಿಇ 07 ಸಾಇಸೇ 2016 ಬೆಂಗಳೂರು ದಿನಾಂಕ: 01-10-2022 ರಲ್ಲಿ ಕೆ.ಆರ್. ಪುರಂ ಕಛೇರಿಯ ಖಜಾನೆ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಸರ್ಕಾರಿ ರಾಜಸ್ವ ದುರುಪಯೋಗ ಮಾಡಿರುವ ಪ್ರಕರಣದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 (1) (ಎ) ರನ್ವಯ ಶ್ರೀಮತಿ ದೃವಕುಮಾರಿ, ಅಧೀಕ್ಷಕರು (ನಿವೃತ್ತ) ಇವರ ನಿವೃತ್ತ ವೇತನದಲ್ಲಿ ಶೇ 5 ರಷ್ಟನ್ನು 6 ತಿಂಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ. |

| | | | |
|---|---|---|---|
| 6. | ಬಿ. ಸಿದ್ಧರಾಮಯ್ಯ | ಅಧೀಕ್ಷಕರು ನಿವೃತ್ತ | ಸರ್ಕಾರದ ಆದೇಶ ಸಂಖ್ಯೆ: ಸಾರಿಇ 07 ಸಾಇಸೇ 2016 ಬೆಂಗಳೂರು ದಿನಾಂಕ: 01-10-2022 ರಲ್ಲಿ ಕೆ.ಆರ್. ಪುರಂ ಕಛೇರಿಯ ಖಜಾನೆ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಸರ್ಕಾರಿ ರಾಜಸ್ವ ದುರುಪಯೋಗ ಮಾಡಿರುವ ಪ್ರಕರಣದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 (1) (ಎ) ರನ್ವಯ ಶ್ರೀ ಬಿ. ಸಿದ್ಧರಾಮಯ್ಯ, ಅಧೀಕ್ಷಕರು (ನಿವೃತ್ತ) ಇವರ ನಿವೃತ್ತ ವೇತನದಲ್ಲಿ ಶೇ 5 ರಷ್ಟನ್ನು 6 ತಿಂಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ. |
| 7. | ಶ್ರೀಕಂಠ ಪ್ರಸಾದ | ಅಧೀಕ್ಷಕರು ನಿವೃತ್ತ | ಸರ್ಕಾರದ ಆದೇಶ ಸಂಖ್ಯೆ: ಸಾರಿಇ 07 ಸಾಇಸೇ 2016 ಬೆಂಗಳೂರು ದಿನಾಂಕ: 01-10-2022 ರಲ್ಲಿ ಕೆ.ಆರ್. ಪುರಂ ಕಛೇರಿಯ ಖಜಾನೆ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಸರ್ಕಾರಿ ರಾಜಸ್ವ ದುರುಪಯೋಗ ಮಾಡಿರುವ ಪ್ರಕರಣದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 (1) (ಎ) ರನ್ವಯ ಶ್ರೀ ಶ್ರೀಕಂಠ ಪ್ರಸಾದ, ಅಧೀಕ್ಷಕರು (ನಿವೃತ್ತ) ಇವರ ನಿವೃತ್ತ ವೇತನದಲ್ಲಿ ಶೇ 5 ರಷ್ಟನ್ನು 6 ತಿಂಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ. |
| 8. | ಕೆ. ಕಿರಣ್ ಕುಮಾರ | ದ್ವಿ.ದ.ಸ. | ಸರ್ಕಾರದ ಆದೇಶ ಸಂಖ್ಯೆ: ಸಾರಿಇ 07 ಸಾಇಸೇ 2016 ಬೆಂಗಳೂರು ದಿನಾಂಕ: 01-10-2022 ರಲ್ಲಿ ಕೆ.ಆರ್. ಪುರಂ ಕಛೇರಿಯ ಖಜಾನೆ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಸರ್ಕಾರಿ ರಾಜಸ್ವ ದುರುಪಯೋಗ ಮಾಡಿರುವ ಪ್ರಕರಣದಲ್ಲಿ ಕರ್ನಾಟಕ ನಾಗರೀಕ ಸೇವೆಗಳು (ವರ್ಗೀರಕಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii) ರ ಪ್ರಕಾರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ. ಕಿರಣ್ ಕುಮಾರ, ದ್ವಿ.ದ.ಸ ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಬೀರುವಂತೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಲಾಗಿದೆ. |
| 9. | ಕೆ. ಸೋಮೆಶ್ | ದ್ವಿ.ದ.ಸ. | ಸರ್ಕಾರದ ಆದೇಶ ಸಂಖ್ಯೆ: ಸಾರಿಇ 07 ಸಾಇಸೇ 2016 ಬೆಂಗಳೂರು ದಿನಾಂಕ: 01-10-2022 ರಲ್ಲಿ ಶ್ರೀ ಕೆ. ಸೋಮೆಶ್, ದ್ವಿ.ದ.ಸ ಇವರು ಕೆ.ಆರ್. ಪುರಂ ಕಛೇರಿಯ ಖಜಾನೆ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಸರ್ಕಾರಿ ರಾಜಸ್ವ ದುರುಪಯೋಗ ಮಾಡಿರುವ ಪ್ರಕರಣದ ವಿಚಾರಣಾಧಿಕಾರಿಗಳ ವರದಿ ಮತ್ತು ನೌಕರರು ಸಲ್ಲಿಸಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ, ಸದರಿ ನೌಕರರನ್ನು ಕರ್ನಾಟಕ ನಾಗರೀಕ ಸೇವೆಗಳು (ಪ್ರೊಬೇಷನ್) ನಿಯಮಗಳು 1977 ರ ನಿಯಮ 7 ಮತ್ತು ಕರ್ನಾಟಕ ನಾಗರೀಕ ಸೇವೆಗಳು (ವರ್ಗೀರಕಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(viii) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಿ ಆದೇಶಿಸಲಾಗಿದೆ.<br>ಮುಂದುವರೆದು, ಸದರಿ ನೌಕರರಿಂದ ಸರ್ಕಾರಕ್ಕೆ ಜಮೆ ಮಾಡಬೇಕಾಗಿರುವ ರೂ.8,95,539/- ಗಳನ್ನು ಬಡ್ತಿ ಸಮೇತವಾಗಿ ವಸೂಲಿ ಮಾಡಲು ಸಾರಿಗೆ ಆಯುಕ್ತರು ಕ್ರಮ ವಹಿಸಲು ಆದೇಶಿಸಲಾಗಿದೆ. ಅದರಂತೆ ಕ್ರಮ ವಹಿಸಲಾಗುತ್ತಿದೆ. |